ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾಕಹೊ/64/2015-16. ದಿನಾಂಕ:27-06-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಸಿ.ಗಂಗಮ್ಮ ಗಂಡ ಲೇಟ್ ತಿಪ್ಪೇಸ್ವಾಮಿ<br>2)ತಿಪ್ಪಣ್ಣ ತಂದೆ ಸಂಗನಬಸಪ್ಪ<br>ಅಮಲಾಪುರ ಗ್ರಾಮ<br>ಕೂಡ್ಲಿಗಿ ತಾಲೂಕು | 1)ಸಿ.ಬಸಮ್ಮ ಗಂಡ ಬಸಪ್ಪ<br>2)ಮೂರ್ತೆಪ್ಪ ತಂದೆ ಬಸಪ್ಪ<br>ಅಮಲಾಪುರ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಅಮಲಾಪುರ ಗ್ರಾಮದ ಸನಂ 168ಎ. 381ಡಿ. 382ಡಿ. 390ಬಿ. 438ಎಫ್. 439ಬಿ. ವಿಸ್ತೀರ್ಣ 0-21. 0-14. 0-45. 2-85. 0-67. 1-71. ಎಕ್ರೆ ಜಮೀನುಗಳನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಅಮಲಾಪುರ ಗ್ರಾಮದ ಸನಂ 168ಎ. 381ಡಿ. 382ಡಿ. 390ಬಿ. 438ಎಫ್. 439ಬಿ. ವಿಸ್ತೀರ್ಣ 0-21. 0-14. 0-45. 2-85. 0-67. 1-71. ಎಕ್ರೆ ಜಮೀನುಗಳನ್ನು ಸದರಿ ಗ್ರಾಮದ ಸಿ. ಗಂಗಮ್ಮ ಗಂಡ ಲೇಟ್ ತಿಪ್ಪೇಸ್ವಾಮಿ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಅಮಲಾಪುರ ಇವರು ನಮೂನೆ-21 ನೋಟಿಸನ್ನು ದಿನಾಂಕ 26-12-2014 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಗ್ರಾಮದ ಸಿ.ಬಸಮ್ಮ ಗಂಡ ಬಸಪ್ಪ, ಮೂರ್ತೆಪ್ಪ ತಂದೆ ಬಸಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 10/2015-16. ದಿನಾಂಕ 27-01-2015 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 06-10-2015 ರಿಂದ 27-06-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ.. ಅರ್ಜಿದಾರರು ಅಮಲಾಪುರ ಗ್ರಾಮದ ಸನಂ 168ಎ. 381ಡಿ. 382ಡಿ. 390ಬಿ. 438ಎಫ್. 439ಬಿ. ವಿಸ್ತೀರ್ಣ 0-21. 0-14. 0-45. 2-85. 0-67. 1-71. ಎಕ್ರೆ ಜಮೀನುಗಳು ನನ್ನ ಗಂಡನಾದ ಚತ್ರಿಕಿ ತಿಪ್ಪೇಸ್ವಾಮಿ ತಂದೆ ಬಸಪ್ಪ ಇವರ ಹೆಸರಲ್ಲಿ ಲೆಕ್ಕ ಜಂಟಿ ಪಟ್ಟಾ ದಾಖಲೆ ಇರುತ್ತದೆ. ಇವರು ನಿಧನ ಹೊಂದಿರುತ್ತಾರೆ. ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ಚತ್ರಿಕಿ ತಿಪ್ಪೇಸ್ವಾಮಿ ತಂದೆ ಬಸಪ್ಪ ಇವರ ಹೆಸರನ್ನು ಕಡಿಮೆ ಮಾಡಿ ಪೂರ್ವ ಪಟ್ಟದಾರರ ಜೊತೆ ಜಂಟಿಯಾಗಿ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ಸದರಿ ವಿವಾದಿತ ಜಮೀನುಗಳು ಅಣ್ಣ ತಮ್ಮಂದಿರುಗಳ ಭಾಗ ಇರುವುದರಿಂದ ಪೋತಿವಾರಸು ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ನಮ್ಮ ತಕರಾರು ಇರುವುದಾಗಿ ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆ ತಕರಾರುದಾರರು ಹೇಳಿಕೆಗಳನ್ನು ಕೇಳಿ ಅರ್ಜಿದಾರರು ಹಕ್ಕು ಬದಲಾವಣೆಗೆ ಕೋರಿ ಸಲ್ಲಿಸಿದ ಅರ್ಜಿಗೂ ಮತ್ತು ಖಾತಾದಾರರಿಗೂ ಸಂಬಂಧವಿರದೇ ಇರುವುದು ಕಂಡು ಬಂದಿದ್ದು ಅರ್ಜಿದಾರರನ್ನು ಕೇಳಿದಾಗ ತಕರಾರುದಾರರ ಹೆಸರಿಗೆ ಖಾತಾ ಬದಲಾವಣೆ ಮಾಡುವಂತೆ ವಿಚಾರಣೆಯ ಸಮಯದಲ್ಲಿ ಕೋರಿರುತ್ತಾರೆ. ಸದರಿ ವಿವಾದಿತ ಆಸ್ತೀಗೆ ತಕರಾರುದಾರರು ಯಾವ ರೀತಿಯಿಂದ ಹಕ್ಕುದಾರರು ಎಂಬ ಬಗ್ಗೆ ಸೂಕ್ತ ದಾಖಲೆಗಳನ್ನು ಲಗತ್ತಿಸಿ ಪ್ರತ್ಯೇಕ ಅರ್ಜಿ ಸಲ್ಲಿಸುವಂತೆ ಸೂಚಿಸುತ್ತಾ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಅಮಲಾಪುರ ಗ್ರಾಮದ ಸನಂ 168ಎ. 381ಡಿ. 382ಡಿ. 390ಬಿ. 438ಎಫ್. 439ಬಿ. ವಿಸ್ತೀರ್ಣ 0-21. 0-14. 0-45. 2-85. 0-67. 1-71. ಎಕ್ರೆ ಜಮೀನುಗಳು ಅರ್ಜಿದಾರರು ಹಕ್ಕು ಬದಲಾವಣೆಗೆ ಕೋರಿ ಸಲ್ಲಿಸಿದ ಅರ್ಜಿಗೂ ಮತ್ತು ಖಾತೆದಾರರಿಗೂ ಸಂಬಂಧವಿರದೇ ಇರುವುದು ಕಂಡು ಬಂದ ಕಾರಣ ಅರ್ಜಿದಾರರ ಕೋರಿಕೆಯನ್ನು ತಳ್ಳಿಹಾಕುತ್ತಾ ಯಥಾಸ್ಥಿತಿಯಂತೆ ಮುಂದುವರೆಸಲು ಆದೇಶಿಸಿ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೊಳಿಸಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 27-06-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪ ತಹಶೀಲ್ದಾರರು
ನಾಡಕಚೇರಿ ಕಾರ್ಯಾಲಯ
ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಸಿ.ಗಂಗಮ್ಮ ಗಂಡ ತಿಪ್ಪೇಸ್ವಾಮಿ. ತಿಪ್ಪಣ್ಣ ತಂದೆ ಸಂಗನಬಸಪ್ಪ. ಅಮಲಾಪುರ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಸಿ.ಬಸಮ್ಮ ಗಂಡ ಬಸಪ್ಪ. ಮೂರ್ತೆಪ್ಪ ತಂದೆ ಬಸಪ್ಪ ಅಮಲಾಪುರ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.